ಸ್ಥಾನೀಯ ಪ್ರಾಧಿಕಾರಿ ಕ್ಷೇತ್ರದ ಚುನಾವಣೆ

೬೮೮ (೧೬) ಶ್ರೀ ಕೆ. ಹೆಚ್. ಪಾಟೀಲ್ (ಗದಗ್) ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ ರಾಜ್ಯದಲ್ಲಿ ಸ್ಥಾನೀಯ ಪ್ರಾಧಿಕಾರ ಕ್ಷೇತ್ರಕ್ಕೆ ಸಂಬಂಧಿಸಿರುವಂತೆ ಚುನಾವಣೆಗಳನ್ನು ನಡೆಸಿ ಎಷ್ಟು ವರ್ಷಗಳಾದವು ಹಾಗೂ ವಿಳಂಬಕ್ಕೆ ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

೧೯೭೮ ರಿಂದ ವಿಧಾನ ಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆಗಳನ್ನು ನಡೆಸಿಲ್ಲ. ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಪಟ್ಟಣ ಪಂಚಾಯಿತಿಗಳ ಚುನಾಯಿತ ಸದಸ್ಯರು ಅಸ್ತಿತ್ವದಲ್ಲಿದ್ದಾಗ್ಯೂ ಮಹಾನಗರ ಸಭೆ ಹಾಗೂ ಬಹಳಷ್ಟು ನಗರಸಭೆ ಮತ್ತು ಪುರಸಭೆಗಳಿಗೆ ಚುನಾವಣೆಗಳು ನಡೆಯದಿದ್ದುದರಿಂದ ೧೯೭೮, ೧೯೮೦ ಮತ್ತು ೧೯೮೨ ರಲ್ಲಿ ಸ್ಥಾನೀಯ ಪ್ರಾಧಿಕಾರ ಕ್ಷೇತ್ರಗಳಿಂದ ದ್ವೈವಾರ್ಷಿಕ ಚುನಾವಣೆಗಳನ್ನು ನಡೆಸಲಾಗಿಲ್ಲ. ೧೯೮೩ರಲ್ಲಿ ಮಹಾನಗರ ಸಭೆ, ನಗರಸಭೆ ಮತ್ತು ಪುರಸಭೆಗಳಿಗೆ ಚುನಾವಣೆಗಳು ನಡೆದಿದ್ದರೂ, ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಪಟ್ಟಣ ಪಂಚಾಯಿತಿಗಳ ಚುನಾವಣೆಗಳು ನಡೆಯದಿದ್ದುದರಿಂದ, ೧೯೮೪ ರಲ್ಲಿ ಸಹ ಸ್ಥಾನೀಯ ಪ್ರಾಧಿಕಾರ ಕ್ಷೇತ್ರಗಳಿಂದ ದ್ವೈವಾರ್ಷಿಕ ಚುನಾವಣೆಗಳನ್ನು ನಡೆಸಲಾಗಲಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ಈ ಮಾತನ್ನು ಹೇಳುವಾಗ ತಾಲ್ಲೂಕು ಬೋರ್ಡ್ ಚುನಾವಣೆಗಳು ಆಗುವ ತನಕ ಈ ಚುನಾವಣೆಯನ್ನು ಮಾಡುವುದಿಲ್ಲ ಎನ್ನುವಂತಕ್ಕ ಅರ್ಥದಲ್ಲಿ ನಿಮ್ಮ ಉತ್ತರ ಇದೆ. ಪ್ರಜಾ ಪ್ರಭುತ್ವವಾದಿಗಳೆಂದು ಹೇಳಿಕೊಳ್ಳುತಕ್ಕ ನೀವು ೨೧ ಸ್ಥಾನಗಳನ್ನು ಖಾಲಿ ಇಟ್ಟುಕೊಂಡು ಚುನಾವಣೆಯನ್ನು ಮಾಡಿಲ್ಲವೆಂದು ಹೇಳುವುದಾದರೆ ಯಾವರೀತಿ ಅದನ್ನು ಕೌನ್ಸಿಲ್ ಎಂದು ಕರೆಯುತ್ತೀರೆಂದು ನಾನು ಕೇಳಬೇಕಾಗಿದೆ.

ಎರಡನೆಯದಾಗಿ ತಾವು ಯಾವ ದಿವಸ ಚುನಾವಣೆಯನ್ನು ಮಾಡುತ್ತೀರಿ ? ಲೆಜಿನೇ ಇಸವಿಯಲ್ಲಿ ಬರತಕ್ಕ ಚುನಾವಣೆ ಕಾಲದಲ್ಲಿ ಈ ದ್ವೈವಾರ್ಷಿಕ ಚುನಾವಣೆಯನ್ನು ಮಾಡುವುದಕ್ಕೆ ಸಾಧ್ಯವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದೇ ಪ್ರಶ್ನೆಯನ್ನು ಹಿಂದೆ ನಾನೇ ಕೇಳಿದ್ದೆ. ಸುಮಾರು ೧/೩ ಭಾಗದಷ್ಟು ಸ್ಥಾನಗಳು ವಿಧಾನ ಪರಿಷತ್ತಿನಲ್ಲಿ ಖಾಲಿ ಇರುವುದರಿಂದ ಇದಕ್ಕೆ ವಿಧಾನ ಪರಿಷತ್ತು ಎಂದು ಹೇಗೆ ಹೇಳಬೇಕೆಂಬ ಪ್ರಶ್ನೆಯನ್ನು ಹಿಂದೆ ನಾನೇ ಕೇಳಿದ್ದೆ. ನಾನು ಬಹಳ ದಿವಸದಿಂದಲೂ ಕೇಳುತ್ತಲಿ ಬಂದಿದ್ದೇನೆ, ಮಾನ್ಯ ಸದಸ್ಯರಾದ ಕೆ.ಹೆಚ್. ಪಾಟೀಲ್‌ರವರಿಗೆ ಎಲ್ಲವೂ ಗೊತ್ತಿದೆ. ಆದರೂ ಯಾವ ಕಾರಣದಿಂದ ಅವರು ಈ ಪ್ರಶ್ನೆಯನ್ನು ಕೇಳುತ್ತಿದ್ದಾರೋ ಗೊತ್ತಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದಾಗ ಮುನಿಸಿಪಾಲಿಟಿಗಳಿಗೆ ಚುನಾಯಿತ ಮಂಡಳಿ ಇರಲಿಲ್ಲ. ಆದರೆ ತಾಲ್ಲೂಕು ಬೋರ್ಡ್‌ಗಳು ಇದ್ದವು. ಈ ಸರ್ಕಾರ ಬಂದ ೪-೫ ತಿಂಗಳೊಳಗೆ ಎಲ್ಲಾ ಮುನಿಸಿಪಾಲಿಟಿಗಳು, ಮುನಿಸಿಪಲ್ ಕೌನ್ಸಿಲ್‌ಗಳು, ಮತ್ತು ಎಲ್ಲಾ ಕಾರ್ಪೋರೇಷನ್‌ಗಳಿಗೂ ನಾವು ಚುನಾವಣೆಯನ್ನು ನಡೆಸಿದ್ದೇವೆ. ಹೊಸದಾಗಿ ಬಂದು ಜಿಲ್ಲಾ ಪರಿಷತ್ತು, ಕಾಯಿದೆಯನ್ನು ತರಬೇಕೆಂಬ ಉದ್ದೇಶದಿಂದ ಮತ್ತು ಅದು ಬಹುಬೇಗ ಪಾಸ್ ಆಗಬಹುದೆಂಬ ಉದ್ದೇಶದಿಂದ ಈ ತಾಲ್ಲೂಕು ಬೋರ್ಡ್‌ನ್ನು ನಾವು ಮುಂದು ವರಿಸಲಿಲ್ಲ. ಮುನಿಸಿಪಾಲಿಟಿಗಳ ಚುನಾವಣೆ ಆದಮೇಲೆ ಕೇಂದ್ರ ಸರ್ಕಾರದ ಚುನಾವಣಾ ಕಮೀಷನರ್ ರವರಿಗೆ ನಾನು ೩ ಪತ್ರಗಳನ್ನು ಬರೆದಿದ್ದೇನೆ. ದಯವಿಟ್ಟು ಚುನಾವಣೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ ಎಂದು ಕೇಳಿದ್ದೇನೆ. ಅದಕ್ಕೆ ಅವರು ಏನು ವಾದವನ್ನು ಮಾಡಿದರು ಎಂದರೆ, ಅದನ್ನು ನಾನು ಮಾಡ ಎಂದು ಹೇಳಲಾರೆ ಅವರ ಒಂದು ಪಾಯಿಂಟ್ ಏನೆಂದರೆ ಈಗ ಪುರಸಭೆಗಳ ಚುನಾವಣೆಯಾಗಿದೆ ನಿಜ, ಆದರೆ ಇಡೀ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನರ ಪ್ರತಿನಿಧಿತ್ವ ಇದಕ್ಕೆ ಇಲ್ಲದಿದ್ದರೆ ಇದು ಸರಿಯಾಗಿ ಆಗುವುದಿಲ್ಲ, ಆದ್ದರಿಂದ ಎಲ್ಲಿಯವರೆಗೆ ಈ ಗ್ರಾಮ ಸಂಸ್ಥೆ ಎಂದರೆ ತಾಲ್ಲೂಕು ಬೋರ್ಡ್ ಬಂದರೆ ತಾಲ್ಲೂಕು ಬೋರ್ಡ್, ಟೌನ್ ಪಂಚಾಯಿತಿ ಬಂದರೆ ಟೌನ್ ಪಂಚಾಯಿತಿ, ಇಲ್ಲವೇ ಜಿಲ್ಲಾ ಪರಿಷತ್ತುಗಳು ಅಲ್ಲಿಯವರೆಗೆ ಇದನ್ನು ಮಾಡುವುದು ಸರಿಯಲ್ಲ

ವೆಂದು ಅವರಿಗೆ ನಾನು ಪತ್ರವನ್ನು ಬರೆದಿದ್ದೇನೆ. ಅದನ್ನು ಈಗ ತವಕಕ್ಕೆ ಓದಿ ಹೇಳುತ್ತೇನೆ. ಯಾವಾಗ ಚುನಾವಣೆಯನ್ನು ಮಾಡುತ್ತೀರೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಬಹುಶಃ ಇದೇ ಅವರ ಮೂಲ ಉದ್ದೇಶವಿರಬಹುದೆಂದು ಕಾಣುತ್ತದೆ. ಈ ಚುನಾವಣೆಯನ್ನು ನಾವು ಇಷ್ಟರೊಳಗಾಗಿ ಮಾಡಬಹುದಿತ್ತು. ಆದರೆ ಕೇಂದ್ರ ಸರ್ಕಾರದಿಂದ ಇದಕ್ಕೆ ಒಪ್ಪಿಗೆ ಬರಲಿಲ್ಲದಕ್ಕೆ ಸುಮಾರು ಒಂದೂವರೆ ವರ್ಷ ತಡವಾಯಿತು.

ಮಾನ್ಯ ಅಧ್ಯಕ್ಷರೆ ಅವರು ಅನೇಕ ರೀತಿಯ ಕ್ಲಾರಿಫಿಕೇಷನ್‌ನ್ನು ಏನು ಕೇಳಿದರು ಅವರಿಗೆ ಕೇಳಿದ್ದಕ್ಕೆಲ್ಲಾ ನಾನು ಉತ್ತರವನ್ನು ಕೊಟ್ಟಿದ್ದೇನೆ. ಕನಿಷ್ಠ ಪಕ್ಷ ನಾನು ಜಿ–೬ ಸಾರಿ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿಯಾಗಿದ್ದೇನೆ. ಎಲ್ಲಾ ಆದಮೇಲೆ ಕೊನೆಗೆ ಇದು ಬಂದಿದೆ. ಇದು ಬಂದಮೇಲೆ ರೂಲ್ಸ್ ತಯಾರಾಗಿದೆ. ಮುಂಡಲ್ ಪಂಚಾಯತ್‌ಗಳ ಡೀ ಲಿಮಿಟೇಷನ್ ಮುಗಿದಿದೆ. ಇನ್ನಿತರ ಕಾನ್‌ಸ್ಟಿಟ್ಯೂಯನ್ಸಿಗಳ ಡೀ ಲಿಮಿಟೇಷನ್ ಮುಗಿದಿದೆ. ಇದರ ಬಗ್ಗೆ ಕೊನೆಯ ನೋಟಿಫಿಕೇಷನ್ ಆಗುತ್ತದೆ. ನಮ್ಮ ಉದ್ದೇಶ ಏನೆಂದರೆ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಈ ಸಂಸ್ಥೆಗಳಿಗೆ ಚುನಾವಣೆಯನ್ನು ಮಾಡಬೇಕೆಂಬುದು. ಆದರೆ ಒಂದೇ ಒಂದು ವಿಚಾರ ಏನೆಂದರೆ ಅಷ್ಟರೊಳಗಾಗಿ ಮುಳೆ ಬರಬಹುದೆಂದು ಯೋಚನೆ ಮಾಡಿದ್ದೇವೆ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಈ ಚುನಾವಣೆಗಳನ್ನು ನಡೆಸತಕ್ಕದ್ದು ನಮ್ಮ ಒಂದು ಕಮಿಟ್‌ಮೆಂಟ್,

ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಆಯುರ್ವೇದ ಆಸ್ಪತ್ರೆಗಳನ್ನು ತೆರೆಯುವುದು.

೪೯. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಸ್ತುತ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಆಯುರ್ವೇದ ಆಸ್ಪತ್ರೆಗಳು ಹಾಗೂ ಔಷಧಾಲಯಗಳು ಇಲ್ಲದೇ ಇರುವ ಕಡೆ ಪೂರ್ಣ ಸಲಕರಣೆಗಳನ್ನೊಳಗೊಂಡ ಆಸ್ಪತ್ರೆಗಳನ್ನು ಪ್ರಾರಂಭಿಸಲು ಡಾ॥ ಮೇಲುಕೋಟೆರವರು ಶಿಫಾರಸ್ಸು ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಮೇಲಿನ ಶಿಫಾರಸ್ಸನ್ನು ಜಾರಿಗೆ ತರಲಾಗಿದೆಯೇ ?

ಇ) ಬೆಳಗಾಂನಲ್ಲಿ ಆಯುರ್ವೇದ ಆಸ್ಪತ್ರೆಯನ್ನು ತೆರೆಯಲಾಗಿದೆಯೇ ? ಇಲ್ಲದಿದ್ದಲ್ಲಿ ಯಾವಾಗ ತೆರೆಯಲಾಗುವುದು.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಡಾ॥ ಮೇಲುಕೋಟೆ ಕಮಿಟಿಯು ಜಿಲ್ಲಾ ಹಾಗೂ ತಾಲ್ಲೂಕ್ ಕೇಂದ್ರಗಳಲ್ಲಿ ಆಸ್ಪತ್ರೆಗಳನ್ನು ಹಾಗೂ ಹಳ್ಳಿಗಳಲ್ಲಿ ಚಿಕಿತ್ಸಾಲಯಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದೆ.

ಆ) ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಇದನ್ನು ಕೆಲಮಟ್ಟಿಗೆ ಜಾರಿಗೊಳಿಸಲಾಗಿದೆ.

ಇ) ಇಲ್ಲ. ಹಣಕಾಸಿನ ಪರಿಸ್ಥಿತಿ ಸುಧಾರಿಸಿದಾಗ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸ್ವಾಮಿ, ಮಾನ್ಯ ಮೇಲುಕೋಟೆಯವರ ಶಿಫಾರಸು ಬಂದು ೧೩ ವರ್ಷಗಳಾಯಿತು. ಈ ೧೩ ವರ್ಷಗಳ ಅವಧಿಯಲ್ಲಿ ಯಾವ ಯಾವ ಜಿಲ್ಲಾ ಕೇಂದ್ರಗಳಲ್ಲಿ ಆಸ್ಪತ್ರೆಗಳನ್ನು ತೆರೆದಿದ್ದೀರಿ ? ಈ ಪಟ್ಟಿಯಲ್ಲಿ ಬೆಳಗಾಂ ಸೇರಿದೆಯೇ ಎಂಬುದು ನನಗೆ ಅರ್ಥವಾಗಿಲ್ಲ.

ಶ್ರೀ ಡಿ. ಬಿ. ಇನಾಂದಾರ್.—ಮಾನ್ಯ ಅಧ್ಯಕ್ಷರೆ, ಡಾ॥ ಮೇಲುಕೋಟೆಯವರು ಸುಮಾರು ೬೦ ಶಿಫಾರಸುಗಳನ್ನು ಮಾಡಿದ್ದಾರೆ. ಅವರಲ್ಲಿ ೨೬ನ್ನು ಇಂಪ್ಲಿಮೆಂಟ್ ಮಾಡಲಾಗಿದೆ, ೧೧ ಪಾರ್ಷಿಯಲಿ ಇಂಪ್ಲಿಮೆಂಟ್ ಮಾಡಿದೆ, ೨೩ ಶಿಫಾರಸನ್ನು ಈಗ ಕಾರ್ಯಗತ ಮಾಡಬೇಕಾಗಿದೆ.

ಇನ್ನು ಬೆಳಗಾಂನಲ್ಲಿ ಒಂದು ಆಯುರ್ವೇದ ಆಸ್ಪತ್ರೆಯನ್ನು ತೆರೆಯುವ ಬಗ್ಗೆ ಮಾನ್ಯ ಸದಸ್ಯರಿಯವರು ಪ್ರಶ್ನೆ ಮಾಡಿದ್ದಾರೆ. ನಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಿಸಿದಾಗ ಅದನ್ನು ತೆಗೆದುಕೊಳ್ಳುತ್ತೇವೆ.